**ಅಸಲು ದಾವ ಸಂಖ್ಯೆಃ 278/2013**
**ಪಿ.ಡಬ್ಲೂ -1**

ದಿಃ 20.10.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲುಃ ಶ್ರೀ ವಿ ಬಿ ಎಂ ವಕೀಲರಿಂದ**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಎಸ್.ಕೆ. ಬಿ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ವಾದಿಯ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

1. ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿ ಸರ್ವೇ ನಂಬರ 22/2 ಕ್ಕೆ ಗ್ರಾಮ ಪಂಚಾಯತಿ ಆಸ್ತಿ ನಂಬರ 1/ಎ ಎಂದು ನಂಬರ ನೀಡಲಾಗಿದೆ ಎಂದರೆ ಸರಿಯಲ್ಲ. ಗ್ರಾಮಪಂಚಾಯತಿಯಲ್ಲಿ ಸರ್ವೇ ನಂಬರ 22/2 ಇದುವರೆಗೂ ದಾಖಲಾತಿ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ದಾಖಲಾತಿ ನನ್ನ ಬಳಿ ಇದೆ. ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿ ಆಸ್ತಿ ನಂಬರ 1 ಎ ದ ದಾಖಲೆಯಲ್ಲಿ ಮಾಲೀಕನ ಹೆಸರು ಕಾಲಂನಲ್ಲಿ ಅಥವಾ ಭೋಗವಟಾ ಕಾಲಂನಲ್ಲಿ ಪ್ರತಿವಾದಿ ಹೆಸರು ಇದೆ ಎಂದರೆ ಅದು ಬೋಗಸ್ ಆಗಿರುತ್ತದೆ. ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿಯ ಆಸ್ತಿ ನಂಬರ 1 ಎ ದ ದಾಖಲೆಯಲ್ಲಿ 1982 ರಿಂದ ಇಲ್ಲಿಯವರೆಗೂ ಸಹ ಪ್ರತಿವಾದಿಯ ಹೆಸರು ದಾಖಲಿದೆ

ಎಂದರೆ ಅದು ಬೋಗಸ್ ಆಗಿರುತ್ತದೆ.

ಪ್ರಶ್ನೆಃ 1982 ರಿಂದಲೂ ಆಸ್ತಿ ನಂಬರ 1 ಎ ದ ಗ್ರಾಮಪಂಚಾಯತಿ ದಾಖಲಾತಿಯಲ್ಲಿ ನಿಮ್ಮ ಅಜ್ಜ ಕಲ್ಲಪ್ಪಾ ಮಹಾದೇವ ಪಾಟೀಲ ರವರ ಹೆಸರು ಮಾಲಕ ಅಥವಾ ವಹಿವಾಟುದಾರ ಕಾಲಂನಲ್ಲಿ ಇದೆ ಎಂದು ತೋರಿಸಲು ಯಾವುದಾದರೂ ದಾಖಲಾತಿ ಇದೆಯೇ ?

ಉತ್ತರಃ ಇದೆ.

2. ನಾನು ಈ ರೀತಿ ನನ್ನ ಅಜ್ಜನ ಹೆಸರು ದಾಖಲಾಗಿದೆ ಎಂದು ತೋರಿಸಲು ಯಾವುದೇ ಗ್ರಾಮಪಂಚಾಯತಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಆದರೆ ತಾಲೂಕಾ ಪಂಚಾಯತಿಯಲ್ಲಿರುವ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ಅಜ್ಜನ ಹೆಸರು ಗ್ರಾಮಪಂಚಾಯತಿ ದಾಖಲೆಯಲ್ಲಿ ಇಲ್ಲದೇ ಇರುವುದರಿಂದ ನಾನು ಈ ದಾವೆಯಲ್ಲಿ ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪ್ರಶ್ನೆಃ ನಿಮ್ಮ ಅಜ್ಜ ಕಲ್ಲಪ್ಪಾ ಪಾಟೀಲ ರವರು ಜಿ ಪಿ ನಂಬರ 1/ಎ ದ ಕರಪಾವತಿಸಿದ್ದಾರೆ ಎಂದು ತೋರಿಸಲು ನಿಮ್ಮ ಬಳಿ ಯಾವುದಾದರೂ ದಾಖಲಾತಿ ಇದೆಯೇ ?

ಉತ್ತರಃ ಜಿ ಪಿ ನಂಬರ 1/ಎ ಇದನ್ನು ಈಗ ಪ್ರತಿವಾದಿಯರು ಸೃಷ್ಟಿಸಿರುತ್ತಾರೆ ಹಾಗೂ ಮೊದಲು ಈ ರೀತಿಯ ನಂಬರ ಇಲ್ಲದೇ ಇರುವುದರಿಂದ ಕರಪಾವತಿಸಿರುವ ದಾಖಲೆ ಇರುವುದಿಲ್ಲ.

ಪ್ರಶ್ನೆಃ ನೀವು ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿ ಜಿ ಪಿ ನಂಬರ 1/ಎ ದ ಉತಾರವನ್ನು ನೀವು ಯಾವಾಗಲಾದರೂ ತೆಗೆಸಿದ್ದೀರಾ ?

ಉತ್ತರಃ ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿ ಜಿ ಪಿ ನಂಬರ 1 ಎ ನಂಬರನ್ನು ಹೊಂದಿರುವ ಉತಾರ ಹಿಂದೆ ಯಾವಾಗಲೂ ಇರಲಿಲ್ಲ ಹಾಗೂ ಅದನ್ನು ಈಗ ಸೃಷ್ಟಿಸಲಾಗಿದೆ.

3. ಈಗ ಸದರಿ ಜಿಪಿ ನಂಬರ 1 ಎ ಉತಾರನ್ನು ಈಗ ಬೋಗಸ ಆಗಿ ಸೃಷ್ಟಿಸಲಾಗಿದೆ. ಸದರಿ ಈ ರೀತಿ ಉತಾರನ್ನು ಬೋಗಸ್ಸಾಗಿ ಸೃಷ್ಟಿಸಲಾಗಿರುವ ಉತಾರದ ದಿನಾಂಕವನ್ನು ನನಗೆ ಹೇಳಲು ಬರುವುದಿಲ್ಲ. ಸದರಿ ಬೋಗಸ ದಾಖಲೆಗಳ ವಿರುದ್ದ ನಾನು ತಾಲೂಕ ಪಂಚಾಯತಿ ಯಲ್ಲಿ ಪ್ರಕರಣವನ್ನು ದಾಖಲಿಸಿದ್ದೇನೆ. ಪ್ರತಿವಾದಿ 1982 ರಿಂದ ಇಲ್ಲಿಯವರೆಗೂ ಕಂಗ್ರಾಳಿ ಕೆ ಎಚ್ ಗ್ರಾಮಪಂಚಾಯತಿ ಆಸ್ತಿ ನಂಬರ 1/ಎ ದ ಕರವನ್ನು ತುಂಬಿರುವ ಪಾವತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿದನ್ನು ನಾನು ನೋಡಿರುತ್ತೇನೆ ಆದರೆ ಅದು ಬೋಗಸ್ಸಾಗಿ ಸೃಷ್ಟಿಸಿರುವುದು ಆಗಿರುತ್ತವೆ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಮಾನೀಕ ಭರಮಾ ಕಲ್ಪತ್ರೆ ಇವರ ಮನೆ ಹಾಗೂ ಖುಲ್ಲಾ ಜಾಗ ಇರುತ್ತದೆ ಎಂದರೆ ಉತ್ತರ ದಿಕ್ಕಿಗೆ ಮಾನೀಕ ಭರಮಾ ಕಲ್ಪತ್ರೆ ರವರ ಮನೆ ಮಾತ್ರ ಇರುತ್ತದೆ. ಮಾನೀಕ ಭರಮಾ ಕಲ್ಪತ್ರೆ ರವರು ಸರ್ವೇ ನಂಬರ 22/3 ರಲ್ಲಿ ಮನೆಯನ್ನು ಕಟ್ಟಿದ್ದು ಅದಕ್ಕೆ ಗ್ರಾಮಪಂಚಾಯತಿ ದವರು ಆಸ್ತಿ ನಂಬರ 1 ಎಂದು ನಂಬರ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ಮಾನೀಕ ಭರಮಾ ಕಲ್ಪತ್ರೆ ರವರ ಸರ್ವೇ ನಂಬರ 22/4 ಇರುತ್ತದೆ ಎಂದರೆ ಸರಿಯಲ್ಲ. ಕಲ್ಲಪ್ಪಾ ಮಹಾದೇವ ಪಾಟೀಲ ರವರ ಜೀವಿತಾವಧಿಯಲ್ಲಿ ದಾವಾ ಆಸ್ತಿಯ ಕುರಿತಾಗಿ ಗ್ರಾಮಪಂಚಾಯತಿ ದಾಖಲಾತಿಗಳನ್ನು ಪ್ರಶ್ನಿಸಿರಲಿಲ್ಲ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ಅದರ ಅವಶ್ಯಕತೆ ಇರಲಿಲ್ಲ. ನನ್ನ ತಂದೆ ಸಹ ದಾವಾ ಆಸ್ತಿಯ ಕುರಿತಾಗಿ ಗ್ರಾಮಪಂಚಾಯತಿಯ ದಾಖಲೆಗಳನ್ನು ಪ್ರಶ್ನಿಸಿರಲಿಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ. ಪ್ರತಿವಾದಿ ದಾವಾ ಆಸ್ತಿಯ ಮಾಲೀಕ ಹಾಗೂ ಕಬ್ಜಾದಾರ ಆಗಿದ್ದರಿಂದ ನನ್ನ ತಂದೆ ಆಗಲೀ ಅಥವಾ ನನ್ನ ಅಜ್ಜ ಆಗಲೀ ಈ ರೀತಿ ದಾಖಲೆಗಳನ್ನು ಪ್ರಶ್ನಿಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಯ ಹೆಸರು ಶ್ರೀಮತಿ ಚಂದುಭಾಯಿ ಕಲ್ಲಪ್ಪಾ ಪಾಟೀಲ. ನನ್ನ ಅಜ್ಜಿ ದಿನಾಂಕ

23.09.2003 ರಂದು ಮೃತಳಾದಳು ಎಂದರೆ ನನಗೆ ನೆನಪಿಲ್ಲ. ನನ್ನ ಅಜ್ಜ ದಿನಾಂಕ 11.12.2006 ರಂದು ಮೃತರಾದರು ಎಂದರೆ ಸರಿ. ನನ್ನ ತಂದೆ ಹಾಗೂ 3 ಹೆಣ್ಣು ಮಕ್ಕಳು ಮಕ್ಕಳಾಗಿದ್ದರು. ನನ್ನ ತಂದೆ ಸಹೋದರಿಯರ ಹೆಸರು ಸುಲೋಚನಾ, ಇಂದು ಎಂದು ಆಗಿದ್ದು ಮತ್ತೋಬ್ಬ ಸಹೋದರಿಯ ಹೆಸರು ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ ದಿನಾಂಕ 13.07.2011 ರಂದು ಮೃತರಾಗಿರುತ್ತಾರೆ. ನನ್ನ ಮಾತೃಭಾಷೆ ಮರಾಠಿಯಾಗಿರುತ್ತದೆ ಎಂದರೆ ಸರಿ.

4. ಬಾಂಡ್ ಪೇಪರಗಳು ಮತ್ತು ದಸ್ತ ದಾಖಲೆಗಳು ಬೆಳಗಾವಿಯಲ್ಲಿ ಹಲವಾರು ಕಡೆ ಸಿಗುತ್ತವೆ ಎಂದರೆ ಸರಿ. ಈಗ ನಾನು ನೋಡುತ್ತೀರುವ ಮೃತ್ಯು ಪತ್ರದ ದೃಡೀಕೃತ ನಕಲನ್ನು ನಾನು P and SC 22/2014 ನಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಶಾನೆ ಡಿ 5 ಎಂದು ಗುರುತಿಸಲಾಯಿತು. ನಿಶಾನೆ ಡಿ 5 100/- ರೂಪಾಯಿ ಬಾಂಡ್ ಮೇಲೆ ಬರೆಯಲಾಗಿದೆ ಎಂದರೆ ಸರಿ. ನಿಶಾನೆ ಡಿ 5 ನ್ನು ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ , ಗೋಕಾಕ ಶಾಖೆಯಿಂದ ಪಡೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಡಿ 5 ನೋಂದಾಯಿತ ಮೃತ್ಯು ಪತ್ರ ಅಲ್ಲ ಎಂದರೆ ಗೊತ್ತಿಲ್ಲ. ನಿಶಾನೆ ಡಿ 5 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಆದರೆ ವಕೀಲರಿಗೆ ನಾನು ಅದನ್ನು ಕೊಟ್ಟ ನಂತರ ಅದರ ವಿಚಾರ ನನಗೆ ತಿಳಿದಿರುತ್ತದೆ.

ಪ್ರಶ್ನೆಃ ನೀವು P and Sc 22/2014 ರ ಪ್ರಕರಣದಲ್ಲಿ ನನ್ನ ತಂದೆಯ ಸಹೋದರಿಯರನ್ನು ಪಕ್ಷಗಾರರನ್ನಾಗಿಸಿಲ್ಲ ಅಲ್ಲವೇ ?

ಉತ್ತರಃ ನನ್ನ ತಂದೆಯ ಸಹೋದರಿಯರ ಸಮ್ಮತಿ ಇರುವುದರಿಂದ ನಾನು ಪಕ್ಷಗಾರರನ್ನಾಗಿಸಿಲ್ಲ.

5. ನನ್ನ ತಂದೆಯ ಸಹೋದರಿಯರು ಸಮ್ಮತಿಯನ್ನು ನೀಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ನಾನು ಹಾಜರುಪಡಿಸುತ್ತೇನೆ. ಸದರಿ P and Sc ಪ್ರಕರಣದಲ್ಲಿ ಮಾನ್ಯ ಜಿಲ್ಲಾ ನ್ಯಾಯಾಲಯವು ನನಗೆ ನನ್ನ ಅಜ್ಜನ ಉತ್ತರ ಜೀವಿತ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕೆಂದು ಆದೇಶಿಸಿತ್ತು ಎಂದರೆ ಸರಿಯಲ್ಲ. ಸದರಿ P and Sc ಪ್ರಕರಣದಲ್ಲಿ ಈ ದಾವೆಯ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿಸಿಲ್ಲ ಎಂದರೆ ಅವರಿಗೆ ಸಂಬಂಧ ಇರುವುದಿಲ್ಲ. P and Sc ಪ್ರಕರಣದ ಪಿಟಿಶನ ಆಸ್ತಿ ಹಾಗೂ ಈ ದಾವೆಯ ದಾವಾ ಆಸ್ತಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಕಬ್ಜಾದಲ್ಲಿರುವುದರಿಂದ ನಾನು P and Sc ಪ್ರಕರಣದಲ್ಲಿ ನಾನು ಅವರನ್ನು ಪಕ್ಷಗಾರರನ್ನಾಗಿಸಿಲ್ಲ. ನಾನು ಸ್ವತಃ ಹೇಳುತ್ತೇನೆ ನಾನು ಮತ್ತು ವಾದಿ ನಂಬರ 1 ರವರು ದಾವಾ ಆಸ್ತಿಯ ಕಬ್ಜಾದಲ್ಲಿರುತ್ತೇವೆ. ದಾವಾ ಆಸ್ತಿ ನಮ್ಮ ಕಬ್ಜಾದಲ್ಲಿ ಇದೆ ಎಂದು ತೋರಿಸಲು ಆರ್ ಟಿ ಸಿ ಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿ ಇಲ್ಲ ಎಂದರೆ ಗ್ರಾಮಪಂಚಾಯತಿ ಕರಪಾವತಿಗಳು ಇರುತ್ತವೆ. ಸದರಿ ಕರಪಾವತಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸುತ್ತೇನೆ. ಪ್ರತಿವಾದಿಯರು ನನ್ನ ವಿರುದ್ದ ತಕರಾರನ್ನು ಸಲ್ಲಿಸುತ್ತಾರೆ ಎಂಬ ಉದ್ದೇಶದಿಂದ P and Sc ಪ್ರಕರಣದಲ್ಲಿ ಪಕ್ಷಗಾರರನ್ನಾಗಿಸಿಲ್ಲ ಎಂದರೆ ಸರಿಯಲ್ಲ. ನಿಶಾನೆ ಡಿ 5 ಮೃತ್ಯು ಪತ್ರ ಖೊಟ್ಟಿ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. P and Sc ಪ್ರಕರಣದಲ್ಲಿ ಗ್ರಾಮಪಂಚಾಯತ ಉತರಾಗಳನ್ನು ಹಾಜರುಪಡಿಸಿದೇ ಕೇವಲ ರೇಕಾರ್ಡ ಆಫ್ ರೈಟ್ಸನ್ನು ಹಾಗೂ ಮೃತ್ಯು ಪತ್ರವನ್ನು ಹಾಜರುಪಡಿಸಿ ಆದೇಶ ಪಡೆದಿದ್ದೇವೆ ಎಂದರೆ ಆರ್ ಟಿ ಸಿ ಮುಖ್ಯ ದಾಖಲೆಯಾಗಿರುತ್ತದೆ ಗ್ರಾಮಪಂಚಾಯತಿ ದಾಖಲೆ

ಮುಖ್ಯವಾಗಿರುವುದಿಲ್ಲ. P and Sc ಯಲ್ಲಿ ಆದ ಆದೇಶದನ್ವಯ ನಾನು ಮತ್ತು ವಾದಿ ನಂಬರ 1 ರವರು ನಮ್ಮ ಆಸ್ತಿಗಳನ್ನು ಕಂದಾಯ ದಾಖಲೆಯಲ್ಲಿ ದಾಖಲಿಸಿಕೊಂಡಿದ್ದೇವೆ ಎಂದರೆ ಸರಿ. ನಾನು ಸ್ವತಃ ಹೇಳುತ್ತೇನೆ ನಾವು ಕಾನೂನುಬದ್ದವಾಗಿ ಹೆಸರನ್ನು ದಾಖಲಿಸಿಕೊಂಡಿರುತ್ತೇನೆ. ಸದರಿ ನಮ್ಮ ಹೆಸರು ಕಂದಾಯ ದಾಖಲಾತಿಯಲ್ಲಿ ಯಾವಾಗ ನಮ್ಮ ಹೆಸರು ದಾಖಲಾಯಿತು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗೆ ನಾನು ಮತ್ತು ವಾದಿ ನಂಬರ 1 ರವರು ಮಾಲೀಕರು ಅಲ್ಲ ಹಾಗೂ ಕಬ್ಜಾವನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ದಾವಾ ಕಾಲಕ್ಕಾಗಿಲೀ ಅಥವಾ ಅದಕ್ಕಿಂತ ಮೊದಲು ಆಗಲೀ ನಾನು ಹಾಗೂ ವಾದಿನಂಬರ 1 ರವರು ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯ ಕಬ್ಜಾದಲ್ಲಿ ಇದ್ದರೂ ಸಹ ನಾನು  P and Sc ಪ್ರಕರಣದಲ್ಲಿ ಆದೇಶವನ್ನು ಪಡೆದುಕೊಂಡು ನಾವು ಪ್ರತಿವಾದಿಯ ಕಬ್ಜಾಕ್ಕೆ ಆತಂಕ ಪಡೆಸಿದ್ದೇವೆ ಎಂದರೆ ಸರಿಯಲ್ಲ. ನನ್ನ ಅಜ್ಜ 2006 ರಲ್ಲಿ ಮೃತರಾಗಿದ್ದರು ಸಹ ನಾವು ಒಂದು ಬನಾವಟಿ ಮೃತ್ಯು ಪತ್ರವನ್ನು 2014 ರಲ್ಲಿ ತಯಾರಿಸಿ P and Sc ದಾಖಲಿಸಿರುತ್ತೇವೆ ಎಂದರೆ ನಮಗೆ ಮೃತ್ಯು ಪತ್ರ ನಂತರ ಸಿಕ್ಕಿರುತ್ತದೆ. ನಾನು ಸ್ವತಃ ಹೇಳುತ್ತೇನೆ ನನಗೆ ಮೃತ್ಯು ಪತ್ರ ಯಾವಾಗ ಸಿಕ್ಕಿತು ಎಂದು ಹೇಳಲು ಬರುವುದಿಲ್ಲ. ನಿಶಾನೆ ಡಿ 5 ನ್ನು ಹಳೆಯ ಬಾಂಡ್ ಪೇಪರ ಮೇಲೆ ಖೊಟ್ಟಿಯಾಗಿ ತಯಾರಿಸಿ P and Sc ಯಲ್ಲಿ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ  ಸರಿಯಲ್ಲ. P and Sc ಆದೇಶ ಆದ ನಂತರ ದಾವಾ ಆಸ್ತಿಗೆ ಹೋದಾಗ ಪ್ರತಿವಾದಿ ಜಗಳ ಮಾಡಬಹುದು ಎಂಬ ಕಾರಣದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಪ್ರತಿವಾದಿ ಈ ರೀತಿ ದಾವಾ ಆಸ್ತಿಗೆ ನಾನು ಹೋದಾಗ ಭೇಟ್ಟಿಯಾಗಿರುತ್ತಾರೆ. ಈ ದಾವೆಯನ್ನು ಸಲ್ಲಿಸಲು ದಾವಾ ಕಾರಣ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡಲು

ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದರೂ ಸಹ ಇಲ್ಲ ಎಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**